ಅಧ್ಯಕ್ಷರು : ಈ ವಿಷಯದ ಬಗ್ಗೆ ಚರ್ಚೆ ಅನಾವಶ್ಯಕ. ರಾಜ್ಯದಲ್ಲಿ ಗ್ರಾನೈಟ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸಮಗ್ರವಾದ ತನಿಖೆಯನ್ನು ನಡೆಸಿ ಸದನಕ್ಕೆ ವರದಿಯನ್ನು ಸಲ್ಲಿಸಲು ರಚಿಸಲಾಗಿರುವ ವಿಧಾನ ಮಂಡಲದ ಜಂಟಿ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು 1996ನೇ ಮಾರ್ಚ ಅಂತ್ಯದವರೆಗೆ ಕಾಲಾವಕಾಶವನ್ನು ವಿಸ್ತರಿಸಲಾಗಿದೆ.

ವರದಿಯನ್ನೊಪ್ಪಿಸುವುದು

ಶ್ರೀ ಡಿ. ನಾರಾಯಣದಾಸ್ (ಸದಸ್ಯರು, ಕಂದಾಯ, ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಇಲಾಖಾ ವಿಷಯ ಸಮಿತಿ) : ಮಾನ್ಯ ಅಧ್ಯಕ್ಷರೇ, ಕಂದಾಯ, ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಇಲಾಖಾ ವಿಷಯ ಸಮತಿಯು ಬೀದರಜಿಲ್ಲೆ ಕೊಳಾರ ಕೈಗಾರಿಕಾ ವಲಯದಲ್ಲಿರುವ ರಾಸಾಯನಿಕ ಕೈಗಾರಿಕೆಗಳಿಂದ ಉಂಟಾಗುವ ಮಾಲಿನ್ಯದ ಬಗ್ಗೆ ತಯಾರಿಸಿದ ಮಧ್ಯಂತರ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವರದಿಯನ್ನೊಪ್ಪಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

(1) ಮಲೆನಾಡು ಅಭಿವೃದ್ಧಿ ಮಂಡಲಿ ಹಾಗೂ ಹೈದ್ರಬಾದ್ ಡೆವಲಪಮೆಂಟ್ ಬೋರ್ಡಗಳಲ್ಲಿ ಇಲಾಖೆಗಳ ಜೊತೆ ಸಮರಸ್ಯವಿಲ್ಲದೆ ಕೆಲಸ ಸ್ಥಗಿತ

+ಶ್ರೀ ಬಿ.ಎಸ್. ಯಡಿಯೂರಪ್ಪ : ಮಲೆನಾಡು ಅಭಿವೃದ್ಧಿ ಮಂಡಲಿ ಹಾಗೂ ಹೈದ್ರಾಬಾದ್ ಡೆವಲಪಮೆಂಟ್ ಬೋರ್ಡ ಇವೆರಡರ ಬಗ್ಗೆ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. ಮಾನ್ಯ ಗೋವಿಂದೇಗೌಡರು ಇಲ್ಲಿದ್ದಾರೆ. ಪ್ರಸ್ತತ ಜಾರಿಯಲ್ಲಿರುವ ನಿಯಮಗಳ ಪ್ರಕಾರ ಈ ಮಂಡಲಿ ತನ್ನ ಹಣವನ್ನು ಖರ್ಚು ಮಾಡುವಂಥ ಸಂದರ್ಭದಲ್ಲಿ ಈ ಅಸಿಸ್ಟಂಟ್ ಕಂಟ್ರೋಲರ್ ಲೋಕಲ್ ಅಡಿಟ್ ಸರ್ಕಲ್ ಈ ಇಲಾಖೆ ಮುಖಾಂತರ ಹಣವನ್ನು ಖರ್ಚು ಮಾಡಬೇಕು ಎನ್ನತಕ್ಕಂಥ ನಿಯಮವನ್ನು ತಾವು ಅನುಸರಿಸಿಕೊಂಡು ಹೋಗುತ್ತಿದ್ದೀರಿ. ಈಗ ಕಳೆದ ನಾಲ್ಕೈದು ವರ್ಷಗಳಿಂದ ನಾವು ನೋಡುತ್ತಿದ್ದೇವೆ ಈ ಅಭಿವೃದ್ಧಿ ಮಂಡಲಿಗೆ ಈ ಸರ್ಕಾರಿ ಇಲಾಖೆಗಳ ಮಧ್ಯೆ ಸರಿಯಾದ ಸಂಬಂಧ ಇಲ್ಲದೆ ಈ ಅನುಷ್ಠಾನ ಅಧಿಕಾರಿಗಳು ಸರಿಯಾದಂಥ ಗಮನವನ್ನು ಕೊಡದೆ ಈ ಮಲೆನಾಡು ಅಭಿವೃದ್ಧಿಗೆ ಆಗಬೇಕಾದಂಥ ಕಾಮಗಾರಿಗಳು ಸ್ಥಗಿತ ಆಗುತ್ತಿರುವಂಥದ್ದು, ಸರಿಯಾದ ರೀತಿಯಾದಂಥ ಪ್ರಗತಿಯಾಗದೇ ಇರುವಂಥ ಒಂದು ವಿಚಿತ್ರವಾದಂಥ ಸಂಗತಿಯನ್ನು ನಾವು ಎದುರಿಸುತ್ತಿದ್ದೇವೆ. ಮಲೆನಾಡು ಅಭಿವೃದ್ಧಿಯು 6.10.1995ರ ಸಭೆಯಲ್ಲಿ ಎಲ್ಲಾ ಸಾಧಕ ಬಾಧಕಗಳನ್ನು ಚರ್ಚೆ ಮಾಡಿ ಮಂಡಲಿಯ ಸೆಕ್ಷನ್ 11(ಎ)ಗೆ ತಿದ್ದುಪಡಿಯನ್ನು ತರಬೇಕೆಂದು ಸರ್ವಾನುಮತದಿಂದ ತೀರ್ಮಾನ ಮಾಡಿದ್ದೇವೆ. ಆಗ ಈ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ ಆಗಲಿ, ಮಲೆನಾಡು ಅಭಿವೃದ್ಧಿ ಮಂಡಲಿಯಾಗಲಿ ಸ್ವತಂತ್ರವಾಗಿ ಹಣವನ್ನು ನೇರವಾಗಿ

ಖರ್ಚು ಮಾಡುವಂಥ ಸ್ವಾತಂತ್ರ್ಯ ಸಿಗುತ್ತದೆ. ಯಾವುದೇ ಅಡ್ಡಿ ಆತಂಕ ಆಗದೇ ಇರುವಂಥ ಒಂದು ಪರಿಸ್ಥಿತಿ ಬರಬಹುದು. ತುಂಬಾ ಚಿಂತನೆಯನ್ನು ಮಾಡಿ ಆ ಸರ್ವಾನುಮತದ ನಿರ್ಣಯವನ್ನು ನಾವು ತೆಗೆದುಕೊಂಡಿದ್ದೇವೆ. ಸೆಕ್ಷನ್ 11(ಎ)ಗೆ ತಿದ್ದುಪಡಿಯನ್ನು ಇಟ್ಟುಕೊಂಡು ಸರ್ಕಾರ ತಕ್ಷಣ ಅದರ ಕಾರ್ಯಕಲಾಪದ ಬಗ್ಗೆ ವಿಶೇಷವಾದಂಥ ಗಮನವನ್ನು ಕೊಡಬೇಕಾದಂಥದ್ದು ಅವಶ್ಯಕವಾಗಿದೆ. ಎರಡನೆಯದರ ಈ ಮಲೆನಾಡು ಅಭಿವೃದ್ಧಿ ಮಂಡಲಿಗೆ 9 ಜಿಲ್ಲೆಗಳು ಬರುತ್ತವೆ. ಬಹಳ ಚಿಂತನೆಯನ್ನು ಮಾಡಿ ಇದರ ಅಭಿವೃದ್ಧಿಗಾಗಿ ಒಂದು ಮಂಡಲಿಯನ್ನು ನಾವು ರಚನೆ ಮಾಡಿದ್ದೇವೆ. ಆದರೆ ಅದರ ಉದ್ದೇಶ ಸಫಲವಾಗಲಿಲ್ಲವೆಂಬ ಭಯ ಜನರನ್ನು ಕಾಡುತ್ತಿದೆ. ಚುನಾಯಿತ ಪ್ರತಿನಿಧಿಗಳಾದಂಥ ನಮ್ಮನ್ನು ಕೂಡ ಭಯ ಕಾಡುತ್ತಿದೆ. 1993-94ರಲ್ಲಿ ತಾವು 33ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದಿರಿ. 1994-95ರಲ್ಲಿ 35 ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಿ ಕೇವಲ 24 ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದಿರಿ. ಆಶ್ಚರ್ಯವೆಂದರೆ ಈಗ ಹಿರಿಯ ಸದಸ್ಯರಾದ ಸನ್ಮಾನ್ಯ ಗೋವಿಂದೇಗೌಡರು ಅಧ್ಯಕ್ಷರಾಗಿರತಕ್ಕಂಥ ಈ ಕಾಲದಲ್ಲಿ 27ಕೋಟಿ ಬಿಡುಗಡೆ ಮಾಡಿದ್ದೀರಿ ಹಾಗೂ ಈ ಕ್ಷಣದವರೆಗೆ ಬಿಡುಗಡೆ ಮಾಡಿರುವುದು 7 ಕೋಟಿ 50 ಲಕ್ಷ ಮಾತ್ರ. ಅಂದರೆ ಯಾವ 9 ಜಿಲ್ಲೆಗಳಲ್ಲಿ 71 ತಾಲ್ಲೂಕು ಸೇರುತ್ತವೆ ಇಷ್ಟು ವಿಸ್ತಾರವಾದಂಥ ಈ ಪ್ರದೇಶಗಳ ಅಭಿವೃದ್ಧಿಗೋಸ್ಕರ ಚಿಂತನೆ ಮಾಡಿ ಒಂದು ಮಂಡಲಿಯನ್ನು ರಚನೆ ಮಾಡಿದಂಥ ಉದ್ದೇಶವೇ ಸಫಲವಾಗದೇ ಇರುವಂಥ ವಿಚಿತ್ರವಾದಂಥ ಒಂದು ಪರಿಸ್ಥಿತಿಯನ್ನು ಇವೊತ್ತು ಕಾಣುತ್ತಿದ್ದೇವೆ. ಅದಕ್ಕಾಗಿ ನಾನು ವಿನಂತಿ ಮಾಡುತ್ತಿದ್ದೇನೆ ಕೊನೆಯ ಪಕ್ಷ ತಾವು ಯಾವ ಹಣವನ್ನು ನಿಗದಿ ಮಾಡಿದ್ದೀರಿ ಆ ಹಣವನ್ನಾದರೂ ಮಾರ್ಚ ಒಳಗಾಗಿ ಖರ್ಚು ಮಾಡುವಂಥ ಭರವಸೆ ಏನಾದರೂ ತಾವು ಕೊಡುತ್ತೀರೋ? 1991-92ರಿಂದ 1995-96ರವರೆಗೆ ಒಟ್ಟು ಅನುದಾನ 143ಕೋಟಿ ರೂಪಾಯಿಗಳಲ್ಲಿ ಇದುವರೆಗೆ ತಾವು ಬಿಡುಗಡೆ ಮಾಡಿರುವುದು ಕೇವಲ 69 ಕೋಟಿಗಳು ಮಾತ್ರ. ಏತಕ್ಕೆ ಈ ರೀತಿ ಆಗುತ್ತಿದೆ ಎಂದು ನನಗೆ ಅರ್ಥವಾಗುತ್ತಿಲ್ಲ. ಪ್ರಾರಂಭದಲ್ಲಿ ಒಂದೆರಡು ವರ್ಷ ಕುಂಠಿತವಾದರೆ ಪರವಾಗಿ ಇಲ್ಲ. ಆದರೆ ಇವೊತ್ತು ಸಹ ಇದೇ ಪರಿಸ್ಥಿತಿ ಇದೆ ಎಂದರೆ, ಇದು ಎಷ್ಟು ಭಯಾನಕವಾಗಿದೆ ಎಂದರೆ 1995-96ರಲ್ಲಿ 27 ಕೋಟಿಯಲ್ಲಿ ಏಳುವರೆ ಕೋಟಿ ಮಾತ್ರ ತಾವು ಬಿಡುಗಡೆ ಮಾಡಿದ್ದೀರಿ ಎಂದರೆ ಎಷ್ಟರ ಮಟ್ಟಿಗೆ ಇನ್ನೊಂದು ತಿಂಗಳಲ್ಲಿ ಎಷ್ಟರಮಟ್ಟಿಗೆ ಕೆಲಸವಾಗಬಹುದು. ಹಣ ಖರ್ಚಾಗಬಹುದು ಎನ್ನುವಂಥ ಭಯವಾಗುತ್ತದೆ. ಕೇವಲ ನಾವು ಬಯಲು ಸೀಮೆ ಅಭಿವೃದ್ಧಿ ಮಂಡಲಿ ಮಾಡಿದ್ದೇವೆ, ಮಲೆನಾಡು ಅಭಿವೃದ್ಧಿ ಮಂಡಲಿ ಮಾಡಿದ್ದೇವೆ, ಹೈದ್ರಾಬಾದ್ ಕರ್ನಾಟಕ ಡೆವಲಪಮೆಂಟ್ ಬೋರ್ಡ ಮಾಡಿದ್ದೇವೆಂದು ಹೇಳಿ ಜನರನ್ನು ತೃಪ್ತಿ ಪಡಿಸುವಂಥಾದ್ದಾಗಿದೆಯೇ ಹೊರತು ಆ ಉದ್ದೇಶ ಸಫಲವಾಗುವಂಥ ಯಾವುದೇ ಪ್ರಾಮಾಣಿಕ ಪ್ರಯತ್ನ ಇವೊತ್ತು ಆಗಲಿಲ್ಲ. ಆದಕಾರಣ ಎರಡು-ಮೂರು ವಿಷಯಗಳ ಬಗ್ಗೆ ನಾನು ಒತ್ತಾಯ ಮಾಡುತ್ತೇನೆ.

1) ಸೆಕ್ಷನ್ 11(ಎ)ಗೆ ತಿದ್ದುಪಡಿಯನ್ನು ಈ ಸದನದಲ್ಲಿ ತಂದು ದಯಮಾಡಿ ಪಾಸು ಮಾಡಿ ಅವರಿಗೆ ಸ್ವತಂತ್ರವಾಗಿ ಅವರು ಕೆಲಸ ನಿರ್ವಹಿಸುವಂಥೆ ಮಾಡುತ್ತೀರೋ?

2) 1995-96ನೇ ಇಸ್ವಿಯಲ್ಲಿ ಇಟ್ಟಿರುವಂಥ 27 ಕೋಟಿ ರೂಪಾಯಿಗಳ ಪೂರ್ಣ ಹಣವನ್ನು ಬಿಡುಗಡೆ ಮಾಡಿ, ಅಷ್ಟು ಹಣ ಖರ್ಚು ಮಾಡುವಂಥ ಆದೇಶವೇನಾದರೂ ತಾವು ಕೊಡುತ್ತೀರೋ?

3) ಮತ್ತು ಕಳೆದ ಎರಡು ತಿಂಗಳುಗಳ ಸಭೆಯಲ್ಲಿ 1996-97ನೇ ಸಾಲಿನಲ್ಲಿ 60 ಕೋಟಿ ರೂಪಾಯಿ ಅಂದಾಜು ಬಡ್ಜೆಟ್ ಅನುಮೋದನೆಯನ್ನು ತಾವು ಮಾಡಿದ್ದೀರಿ, ಮುಂದಿನ ವರ್ಷಕ್ಕಾದರೂ ಸಹ ಈ ಬಡ್ಜೆಟ್ ಅನುಮೋದನೆಯನ್ನು ತಾವು ಮಾಡಿದ್ದೀರಿ, ಮುಂದಿನ ವರ್ಷಕ್ಕಾದರೂ ಸಹ ಈ ಬಡ್ಜೆಟ್ ಮಂಡನೆ ಮಾಡುವ ಕಾಲದಲ್ಲಿ 60 ಕೋಟಿ ಖರ್ಚು ಮಾಡುವಂಥ ಒಂದು ನಿರ್ಧಾರ ಅದಕ್ಕೆ ಬೇಕಾದ ಹಣವನ್ನು ತೆಗೆದಿಡುವಂಥ ಒಂದು ಬಡ್ಜೆಟರಿ ಪ್ರಾವಿಜನ್ ಮಾಡಿಕೊಂಡು ಹಣವನ್ನು ತೆಗೆದಿಡುವಂಥದ್ದು, 1995-96 ಹಣವನ್ನು ಪೂರ್ತಿ ಮಾಡುವಂಥದ್ದು ಮತ್ತು ಸೆಕ್ಷನ್ 11ಎಗೆ ತಿದ್ದುಪಡಿಯನ್ನು ತಕ್ಷಣ ತರುವಂಥ ಕೆಲಸವನ್ನು ತಾವು ಮಾಡಬೇಕೆಂಬ ಒತ್ತಾಯವನ್ನು ಸನ್ಮಾನ್ಯ ಅಧ್ಯಕ್ಷರೇ ತಮ್ಮ ಮೂಲಕ ಸರ್ಕಾರಕ್ಕೆ ಮಾಡುತ್ತಿದ್ದೇವೆ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಈ ರೀಜನಲ್ ಇಂಬ್ಯಾಲೆನ್ಸ ಸರಿಪಡಿಸಬೇಕೆಂದು ಸರ್ಕಾರದವರು ಹೈದರಾಬಾದ್ ಕರ್ನಾಟಕ ಡೆವಲಪಮೆಂಟ್ ಬೋರ್ಡ ಹಾಗೂ ಮಲೆನಾಡು ಅಭಿವೃದ್ಧಿ ಡೆವಲಪಮೆಂಟ್ ಬೋರ್ಡ ಎಂದು ಎರಡನ್ನು ಮಾಡಿದರು. ಮೂರನೆಯದಾಗಿ ಈ ಬಾರ್ಡರ್ ಏರಿಯಾದಲ್ಲಿರತಕ್ಕಂಥ ತಾಲ್ಲೂಕುಗಳು ಕೂಡ ಡೆವಲಪಮೆಂಟ್ ಆಗಬೇಕೆಂದು ಬಾರ್ಡರ್ ಡೆವಲಪಮೆಂಟ್ ಸ್ಕೀಮನ್ನು ಜಾರಿಯಲ್ಲಿ ತಂದಿದ್ದಾರೆ. ಈ ಮೂರು ಸ್ಕೀಮ ಆದ ಮೇಲೆ ಇನ್ನೊಂದು ಬಯಲು ಸೀಮೆ ಡೆವಲಪಮೆಂಟ್ ಬೋರ್ಡನ್ನು ಪ್ರಾರಂಭ ಮಾಡಿದರು. ಅಂದರೆ ಪ್ರಾಕ್ಟಿಕಲ್ಲಾಗಿ ಎಲ್ಲಾ ಏರಿಯಾಕ್ಕೆ ಒಂದೊಂದು ಬೋರ್ಡ ಆದ ಹಾಗಾಯಿತು. ಇದರಿಂದಾಗಿ ಅದರ ಮಹತ್ವ ಉಳಿಯದ ಹಾಗಾಗಿದೆ. ಈಗಾಗಲೇ ಅವರು ಅಂಕಿ ಅಂಶವನ್ನು ಕೊಟ್ಟಿದ್ದಾರೆ ಪುನಃ ನಾನು ಕೊಡುವುದಕ್ಕೆ ಹೋಗುವುದಿಲ್ಲ ಹೈದ್ರಾಬಾದ್ ಕರ್ನಾಟಕ ಡೆವಲಪಮೆಂಟ್ ಬೋರ್ಡಿಗೆ ಈ ವರ್ಷ 60 ಕೋಟಿ ಹಣವನ್ನು ಬಿಡುಗಡೆಯಾಗಿದೆ. ಅದರಲ್ಲಿ ಇಲ್ಲಿಯವರೆಗೆ ಖರ್ಚಾಗಿದ್ದುದು ಕೇವಲ 20 ಕೋಟಿ ರೂಪಾಯಿ. ಅಂದರೆ ಒಂದು ತಿಂಗಳಲ್ಲಿ ನಲವತ್ತು ಕೋಟಿ ಖರ್ಚು ಮಾಡುವುದಕ್ಕೆ ಸಾಧ್ಯ ಇದೆಯೇ? ಏತಕ್ಕಾಗಿ ನಾನು ಈ ಮಾತನ್ನು ಕೇಳುತ್ತಿದ್ದೇನೆಂದರೆ ಈ ಹೆಚಕೆಡಿಬಿ ಕಾರ್ಯದರ್ಶಿಗಳು ಏನು ಇರುತ್ತಾರಲ್ಲ ಅವರು ಆರು ತಿಂಗಳು ಕೂಡ ಇರುವುದಿಲ್ಲ. ಆರು ತಿಂಗಳ ನಂತರ ಇನ್ನೊಬ್ಬ ಕಾರ್ಯದರ್ಶಿಯನ್ನು ಹಾಕುತ್ತೀರಿ ಮತ್ತೇ ಆರು ತಿಂಗಳಲ್ಲಿ ಅವರ ವರ್ಗಾವಣೆ ಆಗುತ್ತದೆ. ಅಲ್ಲಿ ಒಬ್ಬರೂ ಇರುವುದಿಲ್ಲ. ಮತ್ತು ಈ ಆಕ್ಷನ್ ಪ್ಲಾನ್ ಏನು ಇದೆ. ಅದನ್ನು ಅವರು ಇನ್ನುವರೆಗೆ ಅಪ್ರೂವ್ ಮಾಡಿ ಕಳುಹಿಸಿಲ್ಲ. ಹೀಗಾಗಿ ಅಲ್ಲಿ ನಲವತ್ತು ಕೋಟಿ ರೂಪಾಯಿಗಳು ಉಳಿತಾಯವಾಗಿದೆ. ಇದಲ್ಲದೇ ಇನ್ನೊಂದು ಸುದ್ದಿಯಿದೆ, ಅದೇನೆಂದರೆ ಅವರಲ್ಲಿ ಹಣ ಬಿಡುಗಡೆ ಮಾಡಲು ಇಲ್ಲ ಎನ್ನುವ ಸುದ್ದಿ ಇದೆ. ಸರ್ಕಾರ ಈ ಕಡೆ ನಿರ್ಲಕ್ಷ್ಯ ವಹಿಸಿದೆ. ಮಲೆನಾಡು ಅಭಿವೃದ್ಧಿ ಬಗ್ಗೆಯೇನೋ ಸ್ವಲ್ಪಮಟ್ಟಿಗೆ ಹಣ ಖರ್ಚಾಗಿದೆ, ಆದರೆ ಅಕ್ಯುಮುಲೇಟೆಡ್

ಅಮೌಂಟನ್ನು ನಾವು ನೋಡಿದಾಗ ಇನ್ನೂ ಕೂಡ ಇದರಲ್ಲಿಯೂ ಹಣ ಉಳಿದಿದೆ. ಈ ಬಾರ್ಡರ ಏರಿಯಾ ಡೆವಲಪಮೆಂಟಗೆ 10ಕೋಟಿ ಕೊಟ್ಟಿದ್ದರೆ ಇದರಲ್ಲಿ 2 ಕೋಟಿ ಕೂಡ ಖರ್ಚಾಗಿಲ್ಲ. ಇವರು ಈ ರೀತಿಯಾಗಿ ಒಂದು ಕಡೆ ಡೆವಲಪಮೆಂಟ್ ಬೋರ್ಡ್ಸ, ಸ್ಕೀಮ್ಸ ಮಾಡುವುದು ಇನ್ನೊಂದು ಕಡೆ ಇವುಗಳನ್ನು ಜಾರಿಯಲ್ಲಿ ತರುವುದಿಲ್ಲ ಈ ರೀತಿಯಾಗಿ ಕೊನೆಗೆ ದುಡ್ಡನ್ನು ಹಾಗೆಯೇ ಇಟ್ಟುಕೊಂಡು ಬಜೆಟನಲ್ಲಿಟ್ಟಿರತಕ್ಕಂಥದ್ದನ್ನು ಯುಟಿಲೈಸ್ ಮಾಡತಕ್ಕಂಥ ರೀತಿಯಲ್ಲಿ ಸರ್ಕಾರ ಒಂದು ಧೋರಣೆಯನ್ನು ತಾಳಿಲ್ಲ. ಅದಕ್ಕೋಸ್ಕರ ನಾನು ಕೇಳುವುದೇನೆಂದರೆ ಈ ರೀತಿಯಾಗಿ ಅಲಾಟಮೆಂಟ್ ಮಾಡುವುದು ಏಕೆ ಬೇಕು? ಇಲ್ಲ ಎಂದರೆ ನೀವು ಹೇಳಿ, ಎಷ್ಟು ಹಣವನ್ನು ಖರ್ಚು ಮಾಡುವುದಕ್ಕೆ ಸಾಧ್ಯ ಇದೆ ಅಷ್ಟೇ ಹಣವನ್ನು ಬಜೆಟನಲ್ಲಿ ಪ್ರಾವಿಶನ್ ಮಾಡಿ, ಬಜೆಟನಲ್ಲಿ ಇಡುವ ಹಣದಲ್ಲಿ ಕೇವಲ 25ಯಿಂದ 30 ಪರ್ಸೆಂಟ್ ಖರ್ಚು ಮಾಡುವುದು ಎಂದರೆ ಇದು ಯಾವ ರೀತಿಯ ಸೀಮೆ ಡೆವಲಪಮೆಂಟ್ ಆಗುತ್ತದೆ, ನನಗಂತೂ ಗೊತ್ತಾಗುತ್ತಿಲ್ಲ. ಇದನ್ನು ಯಾವ ರೀತಿಯಾಗಿ ರೀಜನಲ್ ಇಂಬ್ಯಾಲೆನ್ಸ ಸರಿಪಡಿಸುತ್ತೀರೋ ಅದು ಗೊತ್ತಾಗುತ್ತಿಲ್ಲ. ರೀಜನಲ್ ಇಂಬ್ಯಾಲೆನ್ಸ್ ಹೆಸರಿನ ಮೇಲೆ ರಿಪೋರ್ಟ್‌ಗಳನ್ನು ತರಿಸಿಕೊಳ್ಳುವುದು ಆಮೇಲೆ ಎಲ್ಲಾ ಡೆವಲಪ್‌ಮೆಂಟ್ ಎಂದು ಹೇಳಿ ಉಳಿದುದನ್ನು ಎಲ್ಲಾದಕ್ಕೂ ಇದೇ ರೀತಿ ಒಂದೊಂದು ಮಾಡಿ ಮತ್ತೆ ಇದೇ ಇರತಕ್ಕಂಥ ದುಡ್ಡನ್ನು ಹಂಚುವುದು. ದಯವಿಟ್ಟು ಹಣವನ್ನು ಯಾವ ರೀತಿಯಾಗಿ ಖರ್ಚು ಮಾಡಬೇಕು ಎನ್ನುವುದರ ಬಗ್ಗೆ ಸ್ವಲ್ಪ ಹೇಳಬೇಕು.

• ಅಧ್ಯಕ್ಷರು : ನಿಮ್ಮ ಭಾಗದಲ್ಲಿ ತೆಲುಗು ಮಾತನಾಡುವವರು ಹೆಚ್ಚಿದ್ದಾರೆ ಅಲ್ಲವೆ, ತೆಲುಗಿನಲ್ಲಿ ಒಂದು ಮಾತನ್ನು ಹೇಳುತ್ತಾರೆ "ನೀವೂ ನೇರ್ಪಿನೇ ವಿದ್ಯೇಗದ ನೀರಜಾ" ಎಂದು ಹೇಳಿ, ಅಂದರೆ ನೀನು ಕಲಿಸಿದ ವಿದ್ಯೆಯೇ ಅಲ್ಲವೇ ಎನ್ನುವ ಅರ್ಥ, ನಾನು ಸುಮ್ಮನೆ ಅದನ್ನು ಹೇಳಿದೆಯಷ್ಟೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ನಾವು ಕಲಿಸಿದ ಅಂಕಿ ಅಂಶವನ್ನು ಕೊಡುತ್ತೇನೆ. ನೀವು 1989, 90, 91, 92, 93, ...

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೇ, ನಾವು ಬಲಿಪಶುಗಳಾಗುತ್ತಿದ್ದೇವೆ, ನಮ್ಮ ಮೇಲೆ ದಯವಿಟ್ಟು ಪರಿಹಾರ ಇದಕ್ಕೆ ಕಂಡುಹಿಡಿಯಬೇಕಲ್ಲ, ಯಾರೋ ಮಾಡಿದ ಪಾಪಕ್ಕೆ ಬೇರೆ ಯಾರೋ ಪ್ರತಿಫಲದ ಉತ್ತರ ಪಡೆಯುವುದು ಏಕೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲ, ಇಲ್ಲ, ನಾವು ಪಾಪ ಮಾಡಿಲ್ಲ, ಏಕೆಂದರೆ ತಪ್ಪು ತಿಳುವಳಿಕೆ ಇದರಲ್ಲಿ ಆಗಬಾರದು, ಹೈದರಾಬಾದ್-ಕರ್ನಾಟಕ ಡೆವಲಪಮೆಂಟ್ ಬೋರ್ಡ 1991ರಲ್ಲಿ 50 ಕೋಟಿ ರೂ.ಗಳು ಬಿಡುಗಡೆಯಾಗಿದ್ದು 50 ಕೋಟಿ ರೂ.ಗಳೂ ಕೂಡ ಖರ್ಚಾಗಿದೆ, 1991-92ರಲ್ಲಿ 61 ಕೋಟಿ ರೂ.ಗಳು ಬಿಡುಗಡೆಯಾಗಿದ್ದು ಅದರಲ್ಲಿ 50 ಕೋಟಿ ರೂ.ಗಳು ಖರ್ಚಾಗಿವೆ. ಆದರೆ ಈಗ ನೀವು ಕೊಟ್ಟಿರುವ 60 ಕೋಟಿಯಲ್ಲಿ ಕೇವಲ 15-20 ಕೋಟಿ ರೂ.ಗಳನ್ನು ಖರ್ಚು ಮಾಡಿದರೆ ಹೇಗೆ? ಆದ್ದರಿಂದ ಇದು ನಾವು ಕಲಿಸಿದ ವಿದ್ಯೆಯಲ್ಲ ಇದು, ಅವರು ಕಲಿತಿರುವ ಹೊಸ ವಿದ್ಯೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗಾಗಲೇ ಮಲೆನಾಡು ಬಗ್ಗೆ ನಾನು ಹೇಳಿದ್ದೇನೆ, ಹೈದ್ರಾಬಾದ್-ಕರ್ನಾಟಕದ ಬಗ್ಗೆ ಖರ್ಗೆಯವರು ಹೇಳಿದ್ದಾರೆ. ಈಗ ದುಡ್ಡೆಲ್ಲಿ ಇಟ್ಟಿದ್ದಾರೆ ಎನ್ನುವ ಬಗ್ಗೆ ಗುಟ್ಟನ್ನು ಜೆ.ಹೆಚ್. ಪಟೇಲರವರೇ ನೀವು ಹೇಳಿಬಿಡಿ. ಇಷ್ಟೊಂದು ತೆರಿಗೆ ಹಣ ಬಂದಿದೆ, ಖರ್ಚಾಗಿಲ್ಲ, ಪಟೇಲರೇ ದುಡ್ಡು ಎಲ್ಲಿ ಇಟ್ಟಿದ್ದೀರಿ ಎಂದು ನಾನು ಕೇಳುವುದು, ಇದಕ್ಕಾಗಿ ಇಷ್ಟೊಂದು ದುಡ್ಡು ಇದೆ, ಆದರೆ ಹೈದ್ರಾಬಾದ್ ಡೆವಲಪಮೆಂಟ್ ಖರ್ಚಾಗಿಲ್ಲ, ಮಲೆನಾಡು ಅಭಿವೃದ್ಧಿಯಲ್ಲೂ ಕೂಡ ಖರ್ಚಾಗಿಲ್ಲ, ಹಾಗಿದ್ದರೆ ದುಡ್ಡು ಎಲ್ಲಿಟ್ಟಿದ್ದಾರೆ, ನೀವು ಮತ್ತು ಮುಖ್ಯಮಂತ್ರಿಗಳು ಸೇರಿಕೊಂಡು ಎಲ್ಲಾದರೂ ಡೆಪಾಸಿಟ್ ಇಟ್ಟು ಇದು ಮುಂದೆ ಕಷ್ಟಕಾಲಕ್ಕೆ ಬೇಕಾಗುತ್ತದೆಂದು ಎಲ್ಲಾದರೂ ಇಟ್ಟಿದ್ದರೆ ಅದನ್ನಾದರೂ ಹೇಳಿ. ನಾವು ಜನರಿಗೆ ಹೇಳುತ್ತೇವೆ. ಏಕೆಂದರೆ ನಮಗೆ ಅನುಮಾನ ಬಂದುಬಿಟ್ಟಿದೆ, ಎಲ್ಲಿಟ್ಟಿದ್ದೀರಿ ದುಡ್ಡು? ನನಗೇನೂ ಅರ್ಥವೇ ಆಗುತ್ತ ಇಲ್ಲ.

ಅಧ್ಯಕ್ಷರು : ಹೆಚ್.ಕೆ.ಡಿ.ಬಿ.ಗೆ ಮತ್ತು ಮಲೆನಾಡು ಅಭಿವೃದ್ಧಿಗೆ ಹೆಚ್ಚಿಗೆ ಸಾಕಷ್ಟು ಹಣವನ್ನು ಖರ್ಚು ಮಾಡುತ್ತಿಲ್ಲವೆಂದು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿ ಹೇಳುತ್ತಿದ್ದಾರೆ, ಪಟೇಲರೇ ನೀವು ಅದಕ್ಕೆ ಸೂಕ್ತ ಉತ್ತರ ಹೇಳಿ.

ಶ್ರೀ ಜೆ.ಹೆಚ್. ಪಟೇಲ್ : ಅವರು ಹೇಳುತ್ತಿರುವುದನ್ನು ನಾನು ಕೇಳುತ್ತಿದ್ದೆ. ಅವರು ಈಗ ಶೂನ್ಯ ವೇಳೆಯಲ್ಲಿ ಇದನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಎಲ್ಲಾ ವಿವರಗಳನ್ನು ತರಿಸಿ ಉತ್ತರ ಕೊಡುತ್ತೇನೆ, ಅವರು ದುಡ್ಡು ಎಲ್ಲಿಟ್ಟಿದ್ದಾರೆ ಎಂದಿದ್ದಾರೆ, ದುಡ್ಡನ್ನು ಮನಮೋಹನ್ ಸಿಂಗ್ ಹತ್ತಿರ ಇಟ್ಟಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮನಮೋಹನಸಿಂಗ್ ಮೇಲೆ ಹೇಳಿದ್ದಾರೆ, ಮಾನ್ಯ ಮುಖ್ಯಮಂತ್ರಿಗಳ ಮತ್ತು ಉಪ ಮುಖ್ಯಮಂತ್ರಿಗಳ ಮನೆ ಮೇಲೆ ದಾಳಿ ಮಾಡುವ ವ್ಯವಸ್ಥೆ ಮಾಡಬೇಕಾಗುತ್ತದೆ, ಬೇರೆ ದಾರಿಯೇ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದಕ್ಕೇನಾದರೂ ಒಂದು ಪರಿಹಾರ ಹೇಳಬೇಕಲ್ಲ ಅಧ್ಯಕ್ಷರೇ, ಏಕೆಂದರೆ ಇನ್ನು ಒಂದು ತಿಂಗಳಲ್ಲಿ ಉಳಿದಿರುವ ಹಣವನ್ನು ಯಾವ ರೀತಿಯಾಗಿ ಖರ್ಚು ಮಾಡುತ್ತಾರೆಂದು ಹೇಳಬೇಕಲ್ಲ! ಹೆಚಕೆಡಿಬಿಯಲ್ಲಿ 40 ಕೋಟಿಯವರೆಗೂ ಹಣ ಉಳಿದಿದೆ, ಮಲೆನಾಡು ಅಭಿವೃದ್ಧಿಯಲ್ಲಿ ಸುಮಾರು 15 ಕೋಟಿ ಇದೆ ಬಾರ್ಡರಏರಿಯಾದಲ್ಲಿ ಸುಮಾರು ೮ ಕೋಟಿ ಇದೆ. ಇದನ್ನು ಯಾವ ರೀತಿಯಾಗಿ ಖರ್ಚು ಮಾಡುತ್ತಾರೆ ಎಂಬುದನ್ನಾದರೂ ಹೇಳಬೇಕಲ್ಲ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಅಧ್ಯಕ್ಷರೇ ನನಗೆ 15 ನಿಮಿಷ ಟೈಮ್ ಕೊಡಿ, ಈಗ ತಾನೇ ನನಗೆ ಇದರ ಬಗ್ಗೆ ಡೀಟೈಲ್ಸ ದೊರೆತಿದೆ, ಸುಮ್ಮನೇ ಬೇಜವಾಬ್ದಾರಿಯಿಂದ ನಾವು ಉತ್ತರ ಹೇಳುವುದಕ್ಕಾಗುವುದಿಲ್ಲ, ಇದಲ್ಲದೇ ಅವರು ಏನು ಕೇಳಿದ್ದಾರೆ ಅದು ನ್ಯಾಯವಾಗಿಯೂ ಇದೆ, ಕೆಲವು ವಿಷಯಗಳಲ್ಲಿ ನಾವು ಏನು ಮಾಡಬೇಕು ಅದನ್ನು ನಾವು ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ಅವರು ಮಲೆನಾಡಿನ ಬಗ್ಗೆ ವಿವರ ತರಿಸಿದ್ದಾರೆ, ಹೆಚ್.ಕೆ.ಡಿ.ಬಿ.ಯದನ್ನು ನೀವು ತರಿಸಬಹುದಲ್ಲಾ!....

ಅಧ್ಯಕ್ಷರು : ಈಗ ಸನ್ಮಾನ್ಯ ವಾಟಾಳ್ ನಾಗರಾಜರವರು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ವಾಟಾಳ್ ನಾಗರಾಜರವರು ಹೆಚ್.ಕೆ.ಡಿ.ಬಿ. ಬಗ್ಗೆ ಏನು ಹೇಳುತ್ತಾರೆ.

ಅಧ್ಯಕ್ಷರು : ಇಲ್ಲ, ಇಲ್ಲ, ಅವರದ್ದು ಹೆಚ್.ಕೆ.ಡಿ.ಬಿ.ಯದ್ದು ಅಲ್ಲ, ಬೇರೆ ವಿಷಯ.

2) ಬೆಳಗಾವಿ ನಗರಸಭೆಯು ಬೆಳಗಾವಿ ಮತ್ತು ನಿಪ್ಪಾಣಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಮಾಡಿರುವ ನಿರ್ಣಯ.

+ ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಈಗಾಗಲೇ ಮಲೆನಾಡ ಮೇಲೂ ಮಾತನಾಡ ಬೇಡಿ, ಹೆಚ್‌ಕೆಡಿಬಿ ಮೇಲೂ ಮಾತನಾಡಬೇಡಿ ಎಂದಿದ್ದಾರೆ, ಅದಕ್ಕೋಸ್ಕರ ನಾನು ಬೇರೆ ವಿಷಯದಲ್ಲಿ ಮಾತನಾಡುತ್ತಿದ್ದೇನೆ ಸ್ವಾಮಿ, ಅದಕ್ಕೇಕೆ ನೀವು ಒಂದು ರೀತಿ 'ಮಾರಿ ಕಣ್ಣು ಹೋತನ ಮೇಲೆ' ಎಂದು ಹೇಳಿದ ಹಾಗೆ ಆಡುತ್ತೀರಿ, ಇದು ಬಹಳ ಅಪಾಯ.

ಮಾನ್ಯ ಅಧ್ಯಕ್ಷರೇ, ಇವೊತ್ತು ಬಹಳ ಅತ್ಯಂತ ಗಂಭೀರವಾದಂಥ ಪರಿಸ್ಥಿತಿ ಉದ್ಭವ ವಾಗಿರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಬೆಳಗಾವಿ ನಗರಸಭೆಯು ಬೆಳಗಾವಿ ಮತ್ತು ನಿಪ್ಪಾಣಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕು ಎಂದು ನಿರ್ಣಯ ಮಾಡಿದ್ದಾರೆ. ಈ ನಗರಸಭೆ ಇರತಕ್ಕಂಥದ್ದು ಅಚ್ಚ ಕನ್ನಡದ ಕರ್ನಾಟಕದ ಭೂಮಿ ಬೆಳಗಾವಿಯಲ್ಲಿ. ಅಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಅಧಿಕಾರಕ್ಕೆ ಬಂದಿದ್ದೇವೆ ಎಂದು ಹೇಳುವ ಅಮಲಿನಲ್ಲಿ ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಿದ್ದೇವೆಂದು ನಿರ್ಣಯ ಮಾಡಿದ್ದಾರೆ. 1990ರಲ್ಲಿಯೂ ಕೂಡ ಅದೇ ರೀತಿಯ ನಿರ್ಣಯವನ್ನು ಮಾಡಿದ್ದರು. ಅದರ ಹಿಂದೆಯೂ ಕೂಡ ಅನೇಕ ಸಾರಿ ಅವರು ಚೇಷ್ಟೆ ಆಡುತ್ತಿದ್ದರು. 1990ರಲ್ಲಿಯೇ ನಾನು ಹೇಳಿದೆ, ಬೆಳಗಾವಿ ನಗರಸಭೆಯನ್ನು ನೇರವಾಗಿ ರದ್ದು ಮಾಡಿ, ಅವರಿಗೆ ಅವಕಾಶ ಕೊಡುವುದಕ್ಕೆ ಹೋಗಬೇಡಿ ಇದೊಂದು ರೀತಿ ಅಪಾಯಕಾರಿಯಾದ ನಿರ್ಧಾರ, ನಮ್ಮ ವರ್ಗದ ಹಿತಕ್ಕೆ ಕರ್ನಾಟಕದ ಗಡಿ ಸಮಸ್ಯೆಗೆ ಸಂಬಂಧಪಟ್ಟಂತೆ ಯಾವುದೋ ಒಂದು ನಿರ್ಣಯಕ್ಕೆ ನಾವು ಬಂದಿದ್ದೇವೆ ಅದೆಲ್ಲಕ್ಕೂ ಮತ್ತು ಒಟ್ಟು ಅಭಿಪ್ರಾಯಕ್ಕೆ ಅವರು ತದ್ವಿರುದ್ಧವಾಗಿ ಮಹಾರಾಷ್ಟ್ರದ ಏಜೆಂಟರಾಗಿ ಕೆಲಸ ಮಾಡತಕ್ಕಂಥ ಆ ನಗರಸಭೆ ಏನಿದೆ ಇದನ್ನು ನಿಜವಾಗಿಯೂ ಈ ರೀತಿಯ ನಿರ್ಣಯ ಮಾಡಿದ ತಕ್ಷಣವೇ ಸರ್ಕಾರ ವಜಾ ಮಾಡಬೇಕಾಗಿತ್ತು. ನನಗೆ ಅನ್ನಿಸುತ್ತದೆ, ಪ್ರಜ್ಞಾಹೀನ ಸ್ಥಿತಿಯಲ್ಲಿ ಸರ್ಕಾರ ಇದೆ. ಈ ನಿರ್ಣಯ ಆಗಿರತಕ್ಕಂಥದ್ದು ಬಹುಶಃ ಸರ್ಕಾರಕ್ಕೆ ಗೊತ್ತಿಲ್ಲವೇನೋ ಎಂದು ನಾನು ತಿಳಿದುಕೊಂಡಿದ್ದೇನೆ. ಈ ದೃಷ್ಟಿಯಲ್ಲಿ ಸರ್ಕಾರಕ್ಕೆ ಕೇಳುತ್ತೇನೆ, ಸರ್ಕಾರದವರು ನಾವೇನು ಷಂಡರಲ್ಲ, ನಾವು ಬಹಳ ಶಕ್ತಿಯುತರು ಎಂದು ಪ್ರತಿಯೊಂದು ಸಾರಿಯೂ ಹೇಳುತ್ತಿರುತ್ತಾರೆ, ಇವೊತ್ತು ಹೆಚ್ಚುಕಡಿಮೆ ಈ ನಿರ್ಣಯವಾಗಿ ಒಂದು ದಿನ ಕಳೆದಿದೆ. ನೇರವಾಗಿ ಸರ್ಕಾರ ಇಷ್ಟು ಹೊತ್ತಿಗೆ ನಗರಸಭೆಯನ್ನು ರದ್ದುಮಾಡಿ, ವಜಾ ಮಾಡಿ ಕ್ರಮ ಕೈಗೊಳ್ಳಬೇಕಾಗಿತ್ತು. ಆದರೆ ಈ ಕ್ಷಣದವರೆಗೂ ಕೂಡ ಸರ್ಕಾರ ಇದರ ಬಗ್ಗೆ ಗಮನವನ್ನು ಹರಿಸಲಿಲ್ಲ. ಇದು ನಿಜಕ್ಕೂ ಬಹಳ ಅಪಾಯಕಾರಿಯಾದಂಥ